Phone: 08282-257424
E-Mail: kuhrmsection@gmail.com

Fax: 08282-256262
Website: www.kuvempu.ac.in

**ಕುವೆಂಪು ವಿಶ್ವವಿದ್ಯಾಲಯ**

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451

**ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ**

ಸಂಖ್ಯೆ:ಕುವಿ:ಮಾಸನಿ–3&7:3436:2023–24 ದಿನಾಂಕ:27–11–2023

ಗೆ,
ಪ್ರಾಂಶುಪಾಲರು
ಸಹ್ಯಾದ್ರಿ ಕಲಾ ಕಾಲೇಜು
ಶಿವಮೊಗ್ಗ

ಮಾನ್ಯರೆ,

ವಿಷಯ: ಸ್ನಾತಕ ವಿಭಾಗಗಳಿಗೆ 2023–24ನೇ ಸಾಲಿನ ಶೈಕ್ಷಣಿಕ ಅವಧಿಗೆ ಅತಿಥಿ ಉಪನ್ಯಾಸಕರ ಸೇವೆಗೆ ಅನುಮತಿ ನೀಡುವ ಕುರಿತು.

ಉಲ್ಲೇಖ:
1. ಜಾಹೀರಾತು ಪ್ರಕಟಣೆ ಸಂಖ್ಯೆ:ಕುವಿ:ಮಾಸನಿ–3&7:2989:2023–24 ದಿನಾಂಕ:11–10–2023
2. ಸಂದರ್ಶನ ದಿನಾಂಕ: 15–11–2023 ಮತ್ತು 16–11–2023
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27–11–2023

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಸ್ನಾತಕ ವಿಭಾಗಗಳಿಗೆ 2023–24ನೇ ಸಾಲಿನ ಶೈಕ್ಷಣಿಕ ಅವಧಿಯಲ್ಲಿ ನಿಯಮಾನುಸಾರ ಖಾಯಂ ಅಧ್ಯಾಪಕರಿಗೆ ಹಂಚಿಕೆ ಮಾಡಿ ಉಳಿಯುವ ಬೋಧನಾ ಕಾರ್ಯಭಾರ ನಿರ್ವಹಣೆಗೆ ಸಂಬಂಧಿಸಿದಂತೆ, ಅತಿಥಿ ಉಪನ್ಯಾಸಕರ ಸೇವೆ ಬಳಸಿಕೊಳ್ಳುವ ಕುರಿತು ಉಲ್ಲೇಖ (01)ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ಜಾಹೀರಾತು ಪ್ರಕಟಣೆ ನೀಡಲಾಗಿತ್ತು. ಪ್ರಕಟಣೆಗನುಸಾರವಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಉಲ್ಲೇಖ (02)ರ ದಿನಾಂಕಗಳಂದು ಆಯ್ಕೆ ಸಮಿತಿಯಿಂದ ಸಂದರ್ಶನ ನಡೆಸಲಾಗಿದೆ.

ವಿಶ್ವವಿದ್ಯಾಲಯದ ಘಟಕ / ನೇರ ಆಡಳಿತಕ್ಕೆ ಒಳಪಟ್ಟ ಕಾಲೇಜುಗಳ ಬೋಧನಾ ಕಾರ್ಯದ ನಿರ್ವಹಣೆಗಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ಕೋರಿ ದಿನಾಂಕ:02–11–2023 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಸರ್ಕಾರದಿಂದ ಇನ್ನೂ ಅನುಮೋದನೆ ದೊರೆಯದ ಪ್ರಯುಕ್ತ ಹಾಗೂ ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಈ ಆಫೀಸ್ ಕಡತ ಸಂಖ್ಯೆ:KU-HRMOAPPT/6/2023ರಲ್ಲಿ ಮಾನ್ಯ ಕುಲಪತಿಗಳು ಆದೇಶ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಆಯ್ಕೆ ಸಮಿತಿಯಿಂದ ಆಯ್ಕೆಗೊಂಡ ಈ ಕೆಳಕಂಡ ಅಭ್ಯರ್ಥಿಗಳಿಂದ ಅತಿಥಿ ಉಪನ್ಯಾಸಕ ಸೇವೆಯನ್ನು ಈ ಆದೇಶ ದಿನಾಂಕದಿಂದ ಅನ್ವಯವಾಗುವಂತೆ 2023–24ನೇ ಸಾಲಿನ ಶೈಕ್ಷಣಿಕ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ತಾವು ಸದರಿ ಅಭ್ಯರ್ಥಿಗಳನ್ನು ಸಂಪರ್ಕಿಸಿ ಸೇವೆ ಪಡೆಯುವುದು. ಸದರಿ ಅಭ್ಯರ್ಥಿಗಳು ಅನುಮತಿ ನೀಡಿದ ದಿನಾಂಕದಿಂದ 03 ದಿನಗಳೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಅನುಮತಿಯು ಸ್ವಯಂ ರದ್ದಾಗುತ್ತದೆ.

| ಕ್ರಮ ಸಂಖ್ಯೆ | ವಿಷಯ | ಆಯ್ಕೆಯಾದ ಅಭ್ಯರ್ಥಿಯ ಹೆಸರು ಶ್ರೀ/ಶ್ರೀಮತಿ/ಡಾ. | | ವರ್ಗ | ಷರಾ |
|---|---|---|---|---|---|
| 1 | ಕನ್ನಡ | 1. | Prema G K | | |
| 2 | ಭಾಷಾಶಾಸ್ತ್ರ | 1. | A Manimekalai | | |
| 3 | ಇಂಗ್ಲೀಷ್ | 1. | Rishika A | | |
| | | 2. | Spoorthi S G | SC | |

--2

| | | | | | |
|---|---|---|---|---|---|
| 4 | ಉರ್ದು | 1. | Shabeena Talath G A | | |
| 5 | ಸಂಸ್ಕೃತ | 1. | Savaitha N | | |
| 6 | ಹಿಂದಿ | 1. | Sumana Rani A | | ಯುಜಿಸಿ ನಿಯಮಾನುಸಾರ ವಿದ್ಯಾರ್ಹತೆ ಹೊಂದಿರುವುದಿಲ್ಲ. ಆದರೆ, ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಬೋಧನಾ ಕಾರ್ಯಭಾರದ ಅಗತ್ಯತೆಗೆ ಅನುಗುಣವಾಗಿ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. |
| 7 | ಸಮಾಜಕಾರ್ಯ | 1. | Kumara Swamy S S | | |
| | | 2. | Shrinchana H S | | |
| | | 3. | Ravi M D | | |
| 8 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | 1. | Varna m | | |
| 9 | ಅರ್ಥಶಾಸ್ತ್ರ | 1. | Nagaraja H V | | |
| | | 2. | Raghavendra C R | | |
| 10 | ರಾಜ್ಯಶಾಸ್ತ್ರ | 1. | Girijavva Belakeri | | |
| | | 2. | Harisha D | ST | |
| 11 | ಮನಃಶಾಸ್ತ್ರ | 1. | Praveen Kumar K B | | |
| 12 | ದೈಹಿಕ ಶಿಕ್ಷಣ | 1. | Prathima BN | | |
| 13 | ಶಿಕ್ಷಣ | 1. | Santhosh B J | | |
| 14 | ಪರಿಸರ ಅಧ್ಯಯನ | 1. | Prema S S. | | |
| 15 | ರಾಜ್ಯಶಾಸ್ತ್ರ/ ಭಾರತ ಸಂವಿಧಾನ | 1. | Yogaraja V.N | SC | |

**ನಿಬಂಧನೆಗಳು:**

1. ಮೇಲ್ಕಂಡಂತೆ ಅತಿಥಿ ಉಪನ್ಯಾಸಕರ ಆಯ್ಕೆಯನ್ನು, ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆ, ಯುಜಿಸಿ ನಿಯಮಾನುಸಾರ ಎನ್.ಇ.ಟಿ/ಕೆ-ಸೆಟ್/ಪಿಹೆಚ್.ಡಿ/ಎಂ.ಫಿಲ್ ಪಡೆದವರಿಗೆ ಮೊದಲ ಆದ್ಯತೆ ಮೇರೆಗೆ ಪರಿಗಣಿಸಲಾಗಿದೆ ಹಾಗೂ ಯುಜಿಸಿ ನಿಯಮಾನುಸಾರ ಅರ್ಹತೆ ಇಲ್ಲದವರನ್ನು ಅಗತ್ಯತೆಗನುಗುಣವಾಗಿ ಸೇವಾ ಅನುಭವದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ರಾಜ್ಯ ಸರ್ಕಾರದ ಮೀಸಲಾತಿ ನಿಯಮಗಳನ್ನು ಪರಿಗಣಿಸಿ ಸಿದ್ಧಪಡಿಸಿದೆ.

2. ವಿಶ್ವವಿದ್ಯಾಲಯವು ಅನುಮೋದಿಸಿರುವ ಕಾಲೇಜುವಾರು ಅಭ್ಯರ್ಥಿಗಳ ಸೇವೆಯನ್ನು ಸದರಿ ಕಾಲೇಜಿನಲ್ಲಿಯೇ ಈ ಆದೇಶ ದಿನಾಂಕದಿಂದ 2023-24ನೇ ಶೈಕ್ಷಣಿಕ ಸಾಲಿನ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ ಬಳಸಿಕೊಳ್ಳಲು ಸೂಚಿಸಲಾಗಿದೆ.

3. ಅತಿಥಿ ಉಪನ್ಯಾಸಕರ ಸೇವೆಯು ವಿಭಾಗಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯ ಹಾಗೂ ಶೈಕ್ಷಣಿಕ / ಸೆಮಿಸ್ಟರ್ ಅವಧಿಗೆ ಮಾತ್ರ ಸೀಮಿತವಾಗಿದ್ದು, ಸದರಿ ಅವಧಿಯ ಮುಕ್ತಾಯ ದಿನಾಂಕದಂದು ಅತಿಥಿ ಉಪನ್ಯಾಸಕರ ಸೇವೆಯು ಸ್ವಯಂ ಯಾವುದೇ ಮುನ್ಸೂಚನೆ ಇಲ್ಲದೆ ರದ್ದಾಗುತ್ತದೆ.

4. ಅತಿಥಿ ಉಪನ್ಯಾಸಕರ ಸೇವೆಯನ್ನು ಯಾವುದೇ ಕಾರಣಕ್ಕೂ ಖಾಯಂ / ಹಂಗಾಮಿ / ತಾತ್ಕಾಲಿಕ / ಅರೆಕಾಲಿಕ ನೇಮಕಾತಿಯೆಂದು ಪರಿಗಣಿಸುವುದಿಲ್ಲ. ಇದು ಶುದ್ಧಾಂಗ ಅತಿಥಿ ಉಪನ್ಯಾಸಕ ಸೇವೆಯಾಗಿರುತ್ತದೆ.

Scanned with OKEN Scanner

5. ಪ್ರಾಂಶುಪಾಲರು ವಿಶ್ವವಿದ್ಯಾಲಯವು ಅನುಮೋದಿಸಿರುವ ಅಭ್ಯರ್ಥಿಗಳಿಂದ ಈ ಕೆಳಗಿನಂತೆ ಮುಚ್ಚಳಿಕೆಯನ್ನು ಬರೆಸಿಕೊಳ್ಳುವುದು.
"ವಿಶ್ವವಿದ್ಯಾಲಯವು ನನಗೆ ನೀಡಿರುವ ಈ ಅತಿಥಿ ಉಪನ್ಯಾಸಕ ಸೇವೆಯ ಅವಕಾಶವು 2023–24ನೇ ಶೈಕ್ಷಣಿಕ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ ಸೀಮಿತವಾಗಿರುತ್ತದೆಯೆಂದು, ಯಾವುದೇ ಕಾರಣಕ್ಕೂ ಖಾಯಂ / ಹಂಗಾಮಿ / ತಾತ್ಕಾಲಿಕ / ಅರೆಕಾಲಿಕ ನೇಮಕಾತಿಯೆಂದು ಪರಿಗಣಿಸಲಾಗುವುದಿಲ್ಲವೆಂದು ಹಾಗೂ ತಾತ್ಕಾಲಿಕ ವ್ಯವಸ್ಥೆಯಾಗಿರುವುದೆಂದು ಮನಗಂಡಿರುತ್ತೇನೆ. ಈ ಸೇವೆಯಿಂದ ನನ್ನನ್ನು ಶೈಕ್ಷಣಿಕ ಸಾಲು ಪೂರ್ಣಗೊಳ್ಳುವ ಮೊದಲೇ ಯಾವುದೇ ಕಾರಣಕ್ಕಾಗಿ, ಯಾವುದೇ ಸಮಯದಲ್ಲಿ, ಯಾವುದೇ ಮುನ್ಸೂಚನೆ ಇಲ್ಲದೇ ವಿಶ್ವವಿದ್ಯಾಲಯವು ರದ್ದುಪಡಿಸಬಹುದೆಂದು ತಿಳಿದಿರುತ್ತೇನೆ ಎಂದು ಮನಪೂರ್ವಕವಾಗಿ ಒಪ್ಪಿ ಈ ಮುಚ್ಚಳಿಕೆಯನ್ನು ಬರೆದುಕೊಡುತ್ತಿದ್ದೇನೆ".

6. ಕಾಲೇಜುಗಳಿಗೆ ಆಯ್ಕೆಯಾಗುವ ಅತಿಥಿ ಉಪನ್ಯಾಸಕರು ಪದೇ ಪದೇ ಕರ್ತವ್ಯಕ್ಕೆ ಗೈರು ಹಾಜರಾದರೆ, ಪಾಠ ಪ್ರವಚನಗಳನ್ನು ಸರಿಯಾಗಿ ನಿರ್ವಹಿಸದಿದ್ದರೆ ಅವರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಲ್ಲಿ, ಅಥವಾ ಕರ್ತವ್ಯ ಲೋಪ / ಅಶಿಸ್ತು ಕಂಡುಬಂದಲ್ಲಿ ಅಂತಹ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಕೈಬಿಡಲು ಸಂಬಂಧಪಟ್ಟ ಪ್ರಾಂಶುಪಾಲರು ಸೂಕ್ತ ದಾಖಲೆಗಳೊಂದಿಗೆ ವರದಿಯನ್ನು ಕೂಡಲೇ ಕುಲಸಚಿವರಿಗೆ ಸಲ್ಲಿಸುವುದು.

7. **ಅತಿಥಿ ಉಪನ್ಯಾಸಕರುಗಳಿಗೆ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯವರು ನಿಗದಿಪಡಿಸಿರುವಂತೆ ಈ ಕೆಳಗಿನಂತೆ ಸಂಭಾವನೆಯನ್ನು 2023–24ನೇ ಶೈಕ್ಷಣಿಕ ಸಾಲಿನ ಸೆಮಿಸ್ಟರ್ ಅಂತ್ಯದವರೆಗೆ ಮಾತ್ರ ಪಾವತಿಸಲಾಗುತ್ತದೆ.**

   ಅ) 5 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ ರೂ. 32,000–00
   ಆ) 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ ರೂ. 30,000–00
   ಇ) 5 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ರೂ. 28,000–00
   ಈ) 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ರೂ. 26,000–00

8. ಅತಿಥಿ ಉಪನ್ಯಾಸಕರು, ಬೆಳಗ್ಗೆ 10–00 ರಿಂದ ಸಂಜೆ 6–00ರವರೆಗೆ ವಿಭಾಗದಲ್ಲಿ ಉಪಸ್ಥಿತರಿರುವುದು ಮತ್ತು ವಿಭಾಗದ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಿಗೂ ಇವರ ಸೇವೆಯನ್ನು ಬಳಸಿಕೊಳ್ಳುವುದು.

9. ಇವರು ಮಾಹೆಯಾನ ನಿರ್ವಹಿಸಿದ ಕಾರ್ಯಭಾರದ ವಿವರವಾದ ತಃಖ್ತೆಯನ್ನು ಲಗತ್ತಿಸಿ, ಉಪ ಕುಲಸಚಿವರು, ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ – ಇವರ ಮೇಲು ಸಹಿಯೊಂದಿಗೆ ಬಿಲ್ಲನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸುವುದು.

10. **ಅನುಮೋದನೆಗೊಂಡ ಅತಿಥಿ ಉಪನ್ಯಾಸಕರಿಂದ ಬೇರೆ ಯಾವುದೇ ವಿಭಾಗ / ಘಟಕ ಕಾಲೇಜುಗಳಲ್ಲಿ / ಖಾಸಗಿ / ಸರ್ಕಾರಿ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲದಿರುವ ಬಗ್ಗೆ ಹಾಗೂ ಪೂರ್ಣಕಾಲಿಕ ಪಿಹೆಚ್.ಡಿ. ಅಭ್ಯರ್ಥಿಗಳಾಗಿ, ಕಾರ್ಯ ನಿರ್ವಹಿಸುತ್ತಿಲ್ಲದಿರುವುದನ್ನು ದೃಢಪಡಿಸಿಕೊಳ್ಳುವುದು. ಬಿಲ್ಲಿನಲ್ಲಿಯೂ ಸಹ ಈ ಕುರಿತು ದೃಢೀಕರಿಸುವುದು.**

11. **ಅತಿಥಿ ಉಪನ್ಯಾಸಕರ ಕಾರ್ಯಭಾರ ಹೊಂದಾಣಿಕೆಯಾಗದೆ ಲೆಕ್ಕ ಪರಿಶೋಧನೆ ಆಕ್ಷೇಪಣೆಯಾದಲ್ಲಿ, ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರುಗಳು ಹೊಣೆಯಾಗಿರುತ್ತಾರೆ.**

ತಮ್ಮ ವಿಶ್ವಾಸಿ

ಕುಲಸಚಿವ

**ಕುಲಸಚಿವ**
**ಕುವೆಂಪು ವಿಶ್ವವಿದ್ಯಾನಿಲಯ,**
**ಜ್ಞಾನ ಸಹ್ಯಾದ್ರಿ**
**ಶಂಕರಘಟ್ಟ–577 451, ಶಿವಮೊಗ್ಗ ಜಿಲ್ಲೆ**

27/11/23

ಪ್ರತಿಗಳು:
1. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ,ಶಂಕರಘಟ್ಟ.
2. ಉಪಕುಲಸಚಿವರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ,ಶಂಕರಘಟ್ಟ. (ಪಿಹೆಚ್.ಡಿ. ವಿಷಯ ನಿರ್ವಹಣಕರ ಗಮನಕ್ಕೆ)
3. ಆಪ್ತ ಸಹಾಯಕರು, ಕುಲಪತಿಗಳು : ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ಕಛೇರಿ ಪ್ರತಿ.

Scanned with OKEN Scanner